ಓದು, ಬರವಣಿಗೆಯ ಜೊತೆಗೆ ಹೋರಾಟ, ಜನಪರ ಕಾಳಜಿಯ ಕೆಲಸಗಳನ್ನು ಮಾಡುತ್ತ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಸರ್ಜಾಶಂಕರ ಹರಳಿಮಠ ಪ್ರಸ್ತುತ ಟಿ.ನರಸೀಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು. ತೀರ್ಥಹಳ್ಳಿಯ ಹರಳಿಮಠ ಅವರ ಹುಟ್ಟೂರು. 'ಕನ್ನಡ ವಿಚಾರ ಸಾಹಿತ್ಯದಲ್ಲಿ ಕನ್ನಡ ಅಸ್ಮಿತೆಯ ಹುಡುಕಾಟದ ನೆಲೆಗಳು' ಎಂಬ ಮಹಾಪ್ರಬಂಧಕ್ಕೆ ಡಾಕ್ಟರೇಟ್ ದೊರೆತಿದೆ. 'ಅಂತರಾಳ' (ಲೇಖನ ಸಂಕಲನ),'ಬೆಚ್ಚಿ ಬೀಳಿಸಿದ ಬೆಂಗಳೂರು' ಮತ್ತು 'ಜೀವದನಿ' (ಅಂಕಣ ಬರಹಗಳು),'ಬಾರಯ್ಯ ಬೆಳದಿಂಗಳೇ' (ಕಥಾ ಸಂಕಲನ) ಸೇರಿದಂತೆ ಹಲವು ಕೃತಿಗಳು ಪ್ರಕಟವಾಗಿವೆ.

ಹಲವು ಕೋಟಿಗಳ ಆಸ್ತಿಯಾಗಿತ್ತು. ಕಟ್ಟಡದಲ್ಲಿದ್ದ ಬಾಡಿಗೆಗೆ ಕೊಟ್ಟ ಮಳಿಗೆಗಳಿಂದ ತಿಂಗಳಿಗೆ ಲಕ್ಷಾಂತರ ಹಣ ಬರುತ್ತಿತ್ತು. ಇದನ್ನು ತನ್ನಿಂದ ದೂರ ಮಾಡಲೇ ಯಾರೋ ಗುರ್ಲಿಂಗನ ಮೂಲಕ ಸಂಚು ಮಾಡುತ್ತಿದ್ದಾರೆಂದು ಅನ್ನಿಸುತ್ತಿತ್ತು. ಈ ಬಾರಿ ಅವಿರೋಧ ಆಯ್ಕೆಗೆ ಸದಸ್ಯರನ್ನು ತೆಗೆದುಕೊಳ್ಳುವಾಗ ಗುರ್ಲಿಂಗನನ್ನು ಕೈಬಿಡುವುದೆಂದು ರುದ್ರಮುನಿ ನಿರ್ಧರಿಸಿಬಿಟ್ಟದ್ದರ ಹಿಂದೆ ಇವೆಲ್ಲ ಇದ್ದವು.

ಗುರ್ಲಿಂಗನಿಗೆ ಕನ್ನಡ ಸಂಘದಲ್ಲಿ ಮುಂದುವರಿಯಲು ಯಾವ ಆಸಕ್ತಿಯೂ ಉಳಿದಿರಲಿಲ್ಲ. ತಾನು ರುದ್ರಮುನಿಯ ಜಾತಿವಂತ ಎನ್ನುವ ಕಾರಣಕ್ಕಷ್ಟೇ ತನ್ನನ್ನು ಸಮಿತಿಗೆ ತೆಗೆದುಕೊಂಡಿದ್ದು ಎನ್ನುವುದು ಅವನಿಗೆ ಅರಿವಾಗಿ ತನ್ನ ಬಗ್ಗೆಯೇ ಅಸಹ್ಯಪಡಲಾರಂಭಿಸಿದ್ದ. ಆದರೆ ಬ್ಯಾಂಕಿನ ಗುಮಾಸ್ತ ಕೆಲಸದಿಂದ ತನ್ನನ್ನು ತೆಗೆದುಹಾಕಿ ತನ್ನ ಊಟದ ತಟ್ಟೆಯನ್ನೇ ಕಿತ್ತುಕೊಂಡಿದ್ದು ಗುರ್ಲಿಂಗನಿಗೆ ರುದ್ರಮುನಿಯ ಮೇಲಿನ ಸಿಟ್ಟನ್ನು ಹೆಚ್ಚಿಸಿತ್ತು. ತನ್ನನ್ನು ಕೆಲಸದಿಂದ ತೆಗೆದರೂ, ಮುಂದಿನ ಚುನಾವಣೆಯ ಅವಿರೋಧ ಆಯ್ಕೆಯಲ್ಲಿ ರುದ್ರಮುನಿ ತಮಗೆ ನೀಡುವ ನಿರ್ದೇಶಕ ಸ್ಥಾನಕ್ಕೆ ಕುತ್ತಾಗಬಹುದು ಎಂಬ ಭಯದಲ್ಲಿ ಕನ್ನಡ ಸಂಘದ ಯಾವ ನಿರ್ದೇಶಕನೂ ತುಟಿಪಿಟಕ್ಕೆನ್ನದೆ ಇರುವುದು ಆತನ ಸಿಟ್ಟನ್ನು ಇನ್ನಷ್ಟು ಜಾಸ್ತಿ ಮಾಡಿತ್ತು. ಇವರಿಗೆಲ್ಲಾ ಬುದ್ಧಿ ಕಲಿಸುತ್ತೇನೆ ಎಂದು ನಿರ್ಧರಿಸಿದ ಗುರ್ಲಿಂಗ ಕೊನೆ ದಿನ ಚುನಾವಣೆಗೆ ನಾಮಪತ್ರ ಸಲ್ಲಿಸಿಯೇ ಬಿಟ್ಟ. ಇದನ್ನು ನಿರೀಕ್ಷಿಸಿರದ ರುದ್ರಮುನಿ ಚಿಂತೆಗೆ ಒಳಗಾದ. ತಾನು ಸೂಚನೆ ಕೊಟ್ಟರೆ ಯಾವ ಸದಸ್ಯನೂ ಗುರ್ಲಿಂಗನಿಗೆ ಓಟು ಹಾಕಲಿಕ್ಕಿಲ್ಲ, ಆದರೂ ಇತ್ತೀಚೆಗೆ ಕೆಲವು ಸದಸ್ಯರ ಮಂಡೆ ಹಾಳಾಗಿ ಅವರೂ ಗುರ್ಲಿಂಗನಂತೆ ಮಾತನಾಡುವುದನ್ನು ರುದ್ರಮುನಿ ಗಮನಿಸಿದ್ದ. ಸಂಘದ ಸಾಹಿತ್ಯದ ಕಾರ್ಯಕ್ರಮಗಳು ನಿರ್ದಿಷ್ಟ ತಿಥಿ, ವಾರಗಳಲ್ಲಿ ನಡೆಸಲೇಬೇಕಾದ ಯಾವುದೋ ಮಠದ ಕಾರ್ಯಕ್ರಮಗಳಂತೆ ಬೋರು ಹೊಡೆಸತೊಡಗಿದ್ದನ್ನು ನೋಡಿದ ಕೆಲವು ಸದಸ್ಯರು ಸಂಘದ ವಾರ್ಷಿಕ ಮಹಾಸಭೆಗಳಲ್ಲಿ ತಕರಾರು ಎತ್ತುವುದನ್ನು ಗಮನಿಸಿದ್ದ ರುದ್ರಮುನಿ ಇವರೆಲ್ಲ ಗುರ್ಲಿಂಗನಿಗೆ ಓಟು ಕೊಟ್ಟು ಗೆಲ್ಲಿಸುವ ಭಯದಲ್ಲಿ ನರಳಿದ. ಇದನ್ನು ಹೇಗೆ ತಪ್ಪಿಸುವುದು ಎಂದು ಹಗಲು ರಾತ್ರಿ ಚಿಂತಿಸಿದ. ಕೊನೆಗೂ ಏನೂ ಹೊಳೆಯದೆ ಪಾಟೀಲಪ್ಪನ ಸಲಹೆ ಕೇಳಿದ.

ಪಾಟೀಲಪ್ಪ ಸಂಘ ಸೇರಿದ ಎರಡ್ಮೂರು ವರ್ಷಗಳಲ್ಲಿಯೇ ದೊಡ್ಡ ಸಾಹಿತಿಯಾಗಿ ಬೆಳೆದುಬಿಟ್ಟದ್ದ ಗಟ್ಟಿಗ. ಕಾಲೇಜು ದಿನಗಳಲ್ಲಿ ಪ್ರೇಮಕವನಗಳನ್ನು ಬರೆಯುತ್ತಿದ್ದ ಪಾಟೀಲಪ್ಪ ಆಮೇಲೆ ಆಧುನಿಕ ವಚನಗಳನ್ನು ಬರೆಯತೊಡಗಿದ. ಸಂಘದ ಕಾರ್ಯದರ್ಶಿಯಾಗುತ್ತಿದ್ದಂತೆ ಆತನ ಬರವಣಿಗೆಯ ವೇಗ ಹತ್ತುಪಟ್ಟು ಹೆಚ್ಚಾಗಿ ಸಾಲು ಸಾಲು ಪುಸ್ತಕಗಳು ಪ್ರಕಟವಾದವು. ಬೇರೆ ಬೇರೆ ಊರುಗಳಲ್ಲಿದ್ದ ಜಾತಿಬಾಂಧವ ಸಾಹಿತಿಗಳನ್ನು ಸಂಘಕ್ಕೆ ಕರೆಸುವುದು, ಸನ್ಮಾನಿಸುವುದನ್ನೂ ಮಾಡುತ್ತಿದ್ದ ಪಾಟೀಲಪ್ಪನ ಋಣಕ್ಕೆ ಬಿದ್ದ ಆ ಸಾಹಿತಿಗಳೂ ತಮ್ಮ ಕಡೆಯಿಂದ ಸಾಧ್ಯವಾದ ಪ್ರಶಸ್ತಿಗಳನ್ನೆಲ್ಲ ಆತನಿಗೆ ಕೊಡಿಸತೊಡಗಿದರು. ವಿವಿಧ ಮಠಗಳಿಂದ ಪಾಟೀಲಪ್ಪನ ವಚನಗಳ ಮೇಲಿನ ಉಪನ್ಯಾಸಕ್ಕೆ ಡಿಮ್ಯಾಂಡ್ ಬರತೊಡಗಿತು. ಸಾಹಿತಿಯಾಗಿ ಬೆಳೆಯುವ ಹೊತ್ತಿನಲ್ಲಿಯೇ ಉಪಾಯವಾಗಿ ತನ್ನ ನೆಂಟರಿಷ್ಟರನ್ನೆಲ್ಲ ಸಂಘದ ಸದಸ್ಯರನ್ನಾಗಿ